ಆದಷ್ಟು ಶೀಘ್ರವಾಗಿ ಕ್ರಮ ತೆಗೆದುಕೊಳ್ಳುತ್ತೇವೆಂದು ತಮ್ಮ ಮುಖಾಂತರ ತಿಳಿಸಬಯಸುತ್ತೇನೆ.

5. ವಿಷಯ :– ರಾಯಚೂರಿನಲ್ಲಿ ಮಿನಿ ವಿಧಾನಸೌಧವನ್ನು ನಿರ್ಮಿಸಲು ವಿಳಂಬ ನೀತಿ ಅನುಸರಿಸುತ್ತಿವ ಬಗ್ಗೆ.

ಶ್ರೀ ಸೈಯದ್ ಯಾಸಿನ್ (ರಾಯಚೂರು) :– ರಾಯಚೂರಿನಲ್ಲಿ ಮಿನಿ ವಿಧಾನಸೌಧವನ್ನು ನಿರ್ಮಿಸಲು ವಿಳಂಬ ನೀತಿ ಅನುಸರಿಸುತ್ತಿರುವುದರ ಬಗ್ಗೆ. ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಯವರು) :– ರಾಜ್ಯದ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ಮಿನಿ ವಿಧಾನಸೌಧ ಕಟ್ಟಡ ನಿರ್ಮಿಸಬೇಕೆಂಬುದು ಸರ್ಕಾರದ ನೀತಿಯಾಗಿದ್ದು. ಆ ಮೇರೆಗೆ ಇಲಾಖಾ ಯೋಜನಾ ಕಾರ್ಯಕ್ರಮದಡಿ ಪ್ರತಿ ವರ್ಷ ಆಯವ್ಯಯಕ್ಕೆ ಅವಕಾಶ ಮಾಡಿಕೊಂಡು ಮಿನಿ ವಿಧಾನಸೌಧ ಕಟ್ಟಡಗಳನ್ನು ನಿರ್ಮಿಸಲಾಗುತ್ತಿದೆ. ರಾಯಚೂರಿನಲ್ಲಿ ಮಿನಿ ವಿಧಾನಸೌಧ ಕಟ್ಟಡವನ್ನು ಈಗಾಗಲೇ ನಿರ್ಮಿಸಲಾಗಿದ್ದು ಆ ಕಟ್ಟಡದಲ್ಲಿ ಕಛೇರಿಗಳು ಕಾರ್ಯನಿರ್ವಹಿಸುತ್ತಿದೆ. ಆದ ಕಾರಣ ರಾಯಚೂರಿನಲ್ಲಿ ಮಿನಿ ವಿಧಾನಸೌಧ ಕಟ್ಟಡ ನಿರ್ಮಿಸುವ ಕುರಿತಂತೆ ಯಾವುದೇ ತಾರತಮ್ಯ ಉಂಟಾಗಿರುವುದಿಲ್ಲ.

ಅಧ್ಯಕ್ಷರು :– clarification ಮಾತ್ರ ಕೇಳಿ.

ಶ್ರೀ ಸೈಯದ್ ಯಾಸೀನ್ :– ಮಾನ್ಯ ಸಭಾಧ್ಯಕ್ಷರೆ, ರಾಯಚೂರು ನಗರದ ಜಿಲ್ಲಾಡಳಿತ ಭವನದ ನಿರ್ಮಾಣಕ್ಕಾಗಿ ನಗರದ ಕೃಷಿ ವಿಶ್ವವಿದ್ಯಾಲಯದ ಆವರಣದಲ್ಲಿ 8 ಎಕರೆ ಜಮೀನನ್ನು ನೀಡಲು ಪ್ರಸ್ತಾವನೆ ಮಾಡಿದ್ದಾರೆ. District Administration have already acquired 8 acres land within the city and 25 crores has been sanctioned during the cabinet meeting at Gulbarga, ಅದರ ಬಗ್ಗೆ District Administration Karnataka Housing Board ಗೆ detail subjects ಕೇಳಿದೆ maps ಎಲ್ಲಾ ಕೊಟ್ಟಿದೆ. I am worried about that they should not shift. The land should be there only. ಏಕೆಂದರೆ ಅದು accessible to people and in the larger interest of the administration also. ಏಕೆಂದರೆ crores of rupees we are wasting in the rent. So, ನಮ್ಮ ರಾಜ್ಯದಲ್ಲಿ ಎಲ್ಲಾ ಕಡೆ ವಿಧಾನ ಸಭಾ District Office Complex ಇದೆ. ರಾಯಚೂರಿನಲ್ಲಿ ಇಲ್ಲ From the Inception of this Government I have been trying this

somehow they have already sanctioned. thanks to Government but implementation ಮಾಡಬೇಕು. ಅದು ಹಣ ಇದೆ. implementation ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. I am not talking about the Taluk Complex for the District. ಇದು ಜಿಲ್ಲಾ ಆಡಳಿತ ಭವನ.

Sri. D.V. Sadananda Gowda (Chief Minister) :- In principle, the Cabinet has given approval for the construction of the 'Zilla Adalitha Bhavan, at Gulbarga Cabinet Meeting the Cabinet has already cleared the file only thing is the land has to be taken from the Agriculture University.

Sri Syed Yasin :- They have already acquired that land, because the land is accessible to people. 700 acres land ನಮ್ಮ Government ಕೊಟ್ಟಿದೆ.

ಅಧ್ಯಕ್ಷರು :– ಒಂದು ನಿಮಿಷ ಅವರು clarify ಮಾಡಲಿ

ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು) :– ಒಂದು ನಿಮಿಷ ಕುಳಿತುಕೊಳ್ಳಿ. ನಾವು ನಿಮ್ಮ ಪರವಾಗಿದ್ದೇವೆ. Already Cabinet ಮುಂದೆ approval ಕೊಟ್ಟಿದೆ ಹಾಗೂ ದುಡ್ಡು ಕೊಡುವುದಕ್ಕೆ ಈಗಾಗಲೇ ಒಂದು ರೀತಿಯ ಒಪ್ಪಿಗೆ ನೀಡಿದೆ. ಆ ಜಾಗವನ್ನು ಪಡೆದುಕೊಂಡು ಮುಂದೆ ಹಂತಹಂತವಾಗಿ DPR ತಯಾರಿಸಿ ನಿಮ್ಮ ಕೆಲಸಕಾರ್ಯಗಳನ್ನು ಮಾಡುವುದಕ್ಕೆ ಸರ್ಕಾರ ಸಿದ್ಧವಿದೆ.

ಅಧ್ಯಕ್ಷರು :– ಮಾನ್ಯ ರೇವಣ್ಣ ಅವರದು ಬೆಳಿಗ್ಗೆ ಶೂನ್ಯ ವೇಳೆಯಲ್ಲಿ ಉತ್ತರ ಕೊಟ್ಟಾಗಿದೆ.

6.ವಿಷಯ :– ಉಡುಪಿ ಜಿಲ್ಲೆಯ ಬ್ರಹ್ಮಾವರ ಸಕ್ಕರೆ ಕಾರ್ಖಾನೆ ಪುನಶ್ಚೇತನದ ಬಗ್ಗೆ.

ಶ್ರೀ ಕೆ. ರಘುಪತಿ ಭಟ್ (ಉಡುಪಿ) :– ಉಡುಪಿ ಜಿಲ್ಲೆಯ ಬ್ರಹ್ಮವರ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಪುನಶ್ಚೇತನಗೊಳಿಸಲು ಸಹಾಯಧನವನ್ನು ಬಿಡುಗಡೆ ಮಾಡಿ ಖಾಸಗಿಯವರಿಗೆ ಮರು ಗುತ್ತಿಗೆ ನೀಡುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಯವರು) :– ದಕ್ಷಿಣ ಕನ್ನಡ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಬ್ರಹ್ಮಾವರ, ಉಡುಪಿ ಜಿಲ್ಲೆ ಇದರ